**ಕರ್ನಾಟಕ ಸರ್ಕಾರ**

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1**

ಸಂ:ಸಿ5(3) ಟಿಪ್ಪಣಿ ಹಾಳೆ 12/2013-14 ದಿನಾಂಕ: 14-05-2013.

ಪ್ರಕಟಣೆ

ವಿಷಯ: ಟಿಪ್ಪಣಿ ಹಾಳೆಗಳನ್ನು ಮುದ್ರಿಸಿಕೊಡಲು ದರಪಟ್ಟಿ ಸಲ್ಲಿಸುವ ಬಗ್ಗೆ.

ಈ ಕಛೇರಿಯ ಉಪಯೋಗಕ್ಕಾಗಿ ಇದರೊಂದಿಗೆ ಲಗತ್ತಿಸಿರುವರುವ ಟಿಪ್ಪಣಿ ಹಾಳೆಯ ಮಾದರಿಯಂತೆ ಟಿಪ್ಪಣಿ ಹಾಳೆಗಳನ್ನು ಮುದ್ರಿಸಿ ಒದಗಿಸಲು ತೀರ್ಮಾನಿಸಲಾಗಿದೆ. ಉತ್ತಮ ಗುಣಮಟ್ಟದ ಹಾಳೆಗಳನ್ನು ಉಪಯೋಗಿಸಿ, ಇದರೊಂದಿಗೆ ಲಗತ್ತಿಸಿರುವ ಮಾದರಿಯಲ್ಲಿ **75 ಜಿ.ಎಸ್.ಎಂ.** ಪೇಪರ್‌ನಲ್ಲಿ "ಟಿಪ್ಪಣಿ ಹಾಳೆ" ಗಳನ್ನು ಮುದ್ರಿಸಿಕೊಡಲು 100 ಹಾಳೆಯ ಒಂದು ಪುಸ್ತಕಕ್ಕೆ ತಮ್ಮ ಸಂಸ್ಥೆಯ ಅತಿ ಕಡಿಮೆ ದರವನ್ನು ದಿನಾಂಕ:07-06-2013ರ ಸಂಜೆ 5-30 ರೊಳಗೆ ಈ ಕಛೇರಿಗೆ ಸಲ್ಲಿಸುವುದು. ನಂತರ ಕಳುಹಿಸುವ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.

<u>ಷರತ್ತುಗಳು:-</u>

1. ದರಪಟ್ಟಿಯಲ್ಲಿ ಪೇಪರ್ ಒಳಗೊಂಡಂತೆ ತಗಲುವ ಒಟ್ಟಾರೆ ವೆಚ್ಚವನ್ನು ನಮೂದಿಸಬೇಕು. ಈ ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ ಇರಬೇಕು.
2. ಕಾರ್ಯಾದೇಶ ಪಡೆದ ಸಂಸ್ಥೆಯು ಸ್ವಂತ ಖರ್ಚಿನಲ್ಲೆ ಕಾರ್ಯ ಮುಗಿಸಿ ಅನಂತರ ಬಿಲ್ಲನ್ನು ಪಡೆಯಲು ಸಿದ್ದರಿರಬೇಕು.
3. ಸಿದ್ದಗೊಂಡ ಟಿಪ್ಪಣಿ ಹಾಳೆಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಈ ಕಛೇರಿಗೆ ಒದಗಿಸುವುದು.
4. ದರ ಅಂಗೀಕರಿಸಿರುವ ಸಂಸ್ಥೆಗೆ ನೀಡಿರುವ ಆದೇಶವನ್ನು ಯಾವುದೇ ಸಂದರ್ಭದಲ್ಲಿ ರದ್ದುಪಡಿಸುವ ಅಥವಾ ಮುಂದುವರಿಸುವ ಅಧಿಕಾರ ಆಯುಕ್ತರ ವಿವೇಚನಾ ಪ್ರಾಧಿಕಾರಕ್ಕೊಳಪಟ್ಟಿರುತ್ತದೆ.

ತಮ್ಮ ನಂಬುಗೆಯ,

[ಎಸ್.ಎಂ.ಶಾಂತರಾಜು]

ಅಪರನಿರ್ದೇಶಕರು [ಆಡಳಿತ] [ಹೆ.ಪ್ರ]

14/5/13 14-5-13 16/5